# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 561 (651) |
| ಸದಸ್ಯರ ಹೆಸರು | : | ರಮೇಶ್ ಬಾಬು (ನಾಮನಿರ್ದೇಶಿತರು) |
| ಉತ್ತರಿಸಬೇಕಾದ ದಿನಾಂಕ | : | 09.03.2026 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು. |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಸರ್ಕಾರಿ ನೌಕರರ ಸೇವಾ ನಿಯಮಗಳ ಅನ್ವಯ ಸರ್ಕಾರಿ ನೌಕರರ ಚಲನ ವಲನ ವಹಿಯನ್ನು ಮತ್ತು ನಗದು ಘೋಷಣೆಯ ವಹಿಯನ್ನು ನಿರ್ವಹಣೆ ಮಾಡುವುದು ಕಡ್ಡಾಯವಾಗಿದ್ದು, ಸಾರ್ವಜನಿಕ ಶಿಕ್ಷಣ ಇಲಾಖೆಯಲ್ಲಿ ಸದರಿ ನಿಯಮಾವಳಿ ಪಾಲಿಸಲಾಗುತ್ತಿದೆಯೇ; (ವಹಿಗಳ ನಿರ್ವಹಣೆ ಕುರಿತು ಜಿಲ್ಲಾ ಮತ್ತು ತಾಲ್ಲೂಕುವಾರು ಮಾಹಿತಿಯನ್ನು ಒದಗಿಸುವುದು);</td><td rowspan="2">ಬೆಂಗಳೂರು, ಮೈಸೂರು, ಕಲಬುರಗಿ ಮತ್ತು ಧಾರವಾಡ ಆಯುಕ್ತಾಲಯಗಳ ಚಲನವಲನ ವಹಿ ಮತ್ತು ನಗದು ಘೋಷಣೆ ವಹಿ ನಿರ್ವಹಣೆ ಬಗ್ಗೆ ಜಿಲ್ಲಾವಾರು ಮಾಹಿತಿಯನ್ನು ಕ್ರೋಢೀಕರಿಸಿ ಇಲಾಖಾ ಜಾಲತಾಣ https://schooleducation.karnataka.gov.in/423/right-to-informtion%5Brti%5D/en ರಲ್ಲಿ ಪ್ರಕಟಿಸಲಾಗಿರುತ್ತದೆ.</td></tr>
<tr><td>ಆ)</td><td>ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕರು (ಆಡಳಿತ) ಇವರು ಪ್ರತಿ ಜಿಲ್ಲೆಯಲ್ಲಿ ಚಲನವಲನ ವಹಿ ಮತ್ತು ನಗದು ಘೋಷಣೆ ವಹಿ ನಿರ್ವಹಣೆ ಮಾಡಿರುತ್ತಾರೆಯೇ; (ಮಾಡಿದ್ದಲ್ಲಿ, ಕಳೆದಎರಡು ವರ್ಷಗಳ ಮಾಹಿತಿಯನ್ನು ಒದಗಿಸುವುದು);</td></tr>
<tr><td>ಇ)</td><td>ರಾಜ್ಯದ ಶಾಲಾ ಶಿಕ್ಷಣ ಇಲಾಖೆಯಲ್ಲಿ ಎಷ್ಟು ಮಂದಿ ಮತ್ತು ಯಾವ ಯಾವ ವಿಭಾಗದಲ್ಲಿ ಉಪನಿರ್ದೇಶಕರು ಕಾರ್ಯ ನಿರ್ವಹಿಸುತ್ತಿದ್ದಾರೇ; ಇವರಲ್ಲಿ ಎಷ್ಟು ಮಂದಿಯ ಮೇಲೆ ಸಾರ್ವಜನಿಕ ದೂರುಗಳು ಬಂದಿರುತ್ತವೆ; ಎಷ್ಟು ಜನರ ಮೇಲೆ ಇಲಾಖಾ ವಿಚಾರಣೆ ನಡೆಯುತ್ತಿದೆ; ಮುಕ್ತಾಯಗೊಂಡ ಪ್ರಕರಣಗಳು ಎಷ್ಟು; ಬಾಕಿ ಇರುವ ಪ್ರಕರಣಗಳು ಎಷ್ಟು; (ಮೂರು ವರ್ಷಗಳ ಮಾಹಿತಿಯನ್ನು ಒದಗಿಸುವುದು)</td><td>1. ರಾಜ್ಯದ ಶಾಲಾ ಶಿಕ್ಷಣ ಇಲಾಖೆಯಲ್ಲಿ ಉಪ ನಿರ್ದೇಶಕರು ಹಾಗೂ ತತ್ಸಮಾನ ವೃಂದ:-<br><br>• ಮಂಜೂರಾದ ಹುದ್ದೆಗಳು-98<br>• ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳು:98<br>• ಸ್ಥಳ ನಿರೀಕ್ಷಣೆಯಲ್ಲಿರುವವರು:03<br>• ಅನ್ಯ ಇಲಾಖೆಯಲ್ಲಿ ಕಾರ್ಯ ನಿರ್ವಹಿಸುತ್ತಿರುವವರು:02<br><br>ಪ್ರಸ್ತುತ ದಿನಾಂಕಕ್ಕೆ ಯಾವುದೇ ಉಪ</td></tr>
</table>

| | | |
|---|---|---|
| | | ನಿರ್ದೇಶಕರು ಹಾಗೂ ತತ್ಸಮಾನ ವೃಂದದ ಹುದ್ದೆ ಖಾಲಿ ಇರುವುದಿಲ್ಲ.<br><br>2. ಕಳೆದ 3 ವರ್ಷಗಳಲ್ಲಿ ಇಲಾಖಾ ವಿಚಾರಣೆ ಇರುವ ಮಾಹಿತಿಯು ಈ ಕೆಳಕಂಡಂತಿದೆ:-<br>• ಬೆಂಗಳೂರು ಮತ್ತು ಮೈಸೂರು ವಿಭಾಗ: 42<br>• ಕಲಬುಗರಿ ವಿಭಾಗ:11<br>• ಧಾರವಾಡ ವಿಭಾಗ:8<br><br>3. ಇಲಾಖಾ ವಿಚಾರಣೆಯು ಮುಕ್ತಾಯಗೊಂಡಿರುವ ಪ್ರಕರಣಗಳ ಮಾಹಿತಿಯು ಈ ಕಳಕಂಡಂತಿರುತ್ತದೆ:-<br>• ಬೆಂಗಳೂರು ಮತ್ತು ಮೈಸೂರು ವಿಭಾಗ:1<br>• ಧಾರವಾಡ ವಿಭಾಗ:7<br>• ಕಲಬುರಗಿ ವಿಭಾಗದಲ್ಲಿ ಯಾವುದೇ ಪ್ರಕರಣ ಮುಕ್ತಾಯಗೊಂಡಿರುವುದಿಲ್ಲ.<br><br>4. ಸಾಮಾನ್ಯ ದೂರುಗಳ ವಿವರ:-<br><br>• ಮೈಸೂರು ವಿಭಾಗದಲ್ಲಿ ಉಪ ನಿರ್ದೇಶಕರ ವಿರುದ್ಧ 63 ಸಾಮಾನ್ಯ ದೂರು ದಾಖಲಾಗಿರುತ್ತದೆ. ಅದರಲ್ಲಿ 12 ಪ್ರಕರಣಗಳನ್ನು ಮುಕ್ತಾಯಗೊಳಿಸಲಾಗಿದ್ದು, ಉಳಿಕೆ ಪ್ರಕರಣಗಳು ಪ್ರಾಥಮಿಕ ವಿಚಾರಣಾ ಹಂತದಲ್ಲಿರುತ್ತದೆ.<br>• ಬೆಂಗಳೂರು ವಿಭಾಗದಲ್ಲಿ ಉಪ ನಿರ್ದೇಶಕರ ವಿರುದ್ಧ 50 ಸಾಮಾನ್ಯ ದೂರುಗಳು ದಾಖಲಾಗಿರುತ್ತವೆ. ಅದರಲ್ಲಿ 6 ಪ್ರಕರಣಗಳನ್ನು ಮುಕ್ತಾಯಗೊಳಿಸಲಾಗಿದ್ದು, ಉಳಿಕೆ ಪ್ರಕರಣಗಳು ಪ್ರಾಥಮಿಕ ವಿಚಾರಣಾ ಹಂತದಲ್ಲಿರುತ್ತದೆ. |
| ಈ) | ಶಾಲಾ ಶಿಕ್ಷಣ ಇಲಾಖೆಯಲ್ಲಿ ಉಪನಿರ್ದೇಶಕರಿಗೆ ಪದೋನ್ನತಿ ನೀಡುವ ಸಂದರ್ಭದಲ್ಲಿ ಸಿ ಅಂಡ್ ಆರ್ ನಿಯಮವಳಿ ಪ್ರಕಾರ ಶಾಲಾ ಶಿಕ್ಷಣ ಇಲಾಖೆ ಅನುಸರಿಸುತ್ತಿರುವ ಕ್ರಮಗಳೇನು; ಈ ಸಂಬಂಧ ಇರುವ ಸರ್ಕಾರಿ ಸುತ್ತೋಲೆಗಳು ಏನು; ಪ್ರಸ್ತುತ | ಚಾಲ್ತಿ ವೃಂದ ನಿಯಮಗಳಂತೆ ಸದರಿ ಹುದ್ದೆಯು ಶೇ.100 ರಷ್ಟು ಬಡ್ತಿ ಹುದ್ದೆಗಳಾಗಿರುತ್ತವೆ ಹಾಗೂ ಶಿಕ್ಷಣಾಧಿಕಾರಿಗಳು ಹಾಗೂ ತತ್ಸಮಾನ ವೃಂದದ ಹುದ್ದೆಯಿಂದ ಬಡ್ತಿ ನೀಡುವ ಮುಖಾಂತರ ಭರ್ತಿ ಮಾಡಲಾಗುತ್ತದೆ. ಪ್ರಸ್ತುತ ದಿನಾಂಕಕ್ಕೆ ಯಾವುದೇ ಉಪ ನಿರ್ದೇಶಕರ ಹಾಗೂ |

| | | |
|---|---|---|
| | ಎಷ್ಟು ಉಪನಿರ್ದೇಶಕರಿಗೆ ಪದೋನ್ನತಿ ನೀಡಲು ಅವಕಾಶ ಇರುತ್ತದೆ: ಸಕಾಲದಲ್ಲಿ ಅವರಿಗೆ ಅದನ್ನು ನೀಡಲಾಗಿದೆಯೇ? | ತತ್ಸಮಾನ ಹುದ್ದೆಗಳು ಖಾಲಿ ಇರುವುದಿಲ್ಲ. ಕಾಲಕಾಲಕ್ಕೆ ಮುಂಬಡ್ತಿ ನೀಡಲು ಕ್ರಮ ವಹಿಸಲಾಗುತ್ತಿದೆ. |

**ಸಂಖ್ಯೆ**:ಇಪಿ 81 ಎಸ್ ಟಿಬಿ 2026

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು.